# ಜನರ ಆಕ್ರೋಶಕ್ಕೆ ಕಣ್ಣೀರು ಹಾಕಿದ್ದೆ

**ಪ್ರವಲಿಕಾ ವೈ.ಎಸ್.**
ಸ್ಟಾರ್‌ಸುವರ್ಣದ
'ಗೌರಿಶಂಕರ' ಗಂಗಾ



■ **ರಾಘವೇಂದ್ರ ಕೆ.**

◆ **ನಿಮ್ಮ ಹೆಸರು ರೇಷ್ಮಾ ಆಗಿದ್ದು ಹೇಗೆ?**

ಅಪ್ಪ ಪ್ರೀತಿಯಿಂದ ಪ್ರವಲಿಕಾ ಎಂದೇ ಹೆಸರು ಇಟ್ಟಿದ್ದರು. ನನ್ನ ಹೆಸರು ಭಿನ್ನವಾಗಿ ಇರಬೇಕು ಎನ್ನುವುದು ಅಪ್ಪನ ಆಸೆ. ಅವರು ಸಾಹಿತಿ ಯಂಡಮೂರಿ ವೀರೇಂದ್ರನಾಥ್ ಅಭಿಮಾನಿ. ಅವರಿಗೆ ಫೋನ್ ಮಾಡಿ ನನಗೆ ಹೆಸರು ಸೂಚಿಸುವಂತೆ ವಿನಂತಿಸಿದ್ದಾರೆ. ಅವರು ಸೂಚಿಸಿದ ಹೆಸರು ಪ್ರವಲಿಕಾ. 'ಮಹಾನಟಿ'ಯಲ್ಲಿಯೂ ಅದೇ ಹೆಸರಿನಿಂದ ಪರಿಚಯ ಆದೆ. ಕಿರುತೆರೆಗೆ ಬಂದ ನಂತರ ತಂಡದಲ್ಲಿ ಉಚ್ಚರಣೆ ಕಷ್ಟ ಆಯಿತು. 'ಆರ್' ಅದೃಷ್ಟ ಅದೇ ಅಕ್ಷರದಿಂದ ಹೆಸರು ಇಡಬೇಕು ಎಂದರು. ಅದೆಲ್ಲ ನನಗೂ ಹೊಸತು. ನಿರ್ದೇಶಕರ ಸಲಹೆಯಂತೆ ಹೆಸರನ್ನು ಬದಲಿಸಿದೆ. ಕ್ರಮೇಣ ಕೆಲವರಿಗೆ ಗೊಂದಲ ಆಯಿತು. ಅದಕ್ಕೆ ಮಹಾನಟಿಯೇ ಕಾರಣ ಆಯಿತು. ಪ್ರವಲಿಕಾ ಎಂದೇ ಪರಿಚಯ ಆಗಿದ್ದ ನನ್ನನ್ನು 'ಮಹಾನಟಿ' ಸೀನಿಯರ್–ಜೂನಿಯರ್ ಕಾರ್ಯಕ್ರಮದಲ್ಲಿ ನನ್ನ ಮೂಲ ಹೆಸರನ್ನು ಹಾಕಿದರು. ಅದನ್ನು ಬಿಟ್ಟುಕೊಡಬಾರದು ಎಂದು ಅದನ್ನೇ ಈಗ ಮುಂದುವರಿಸುತ್ತೇನೆ.

◆ **ನಟನೆ ನಿಮಗೆ ಒಲಿದಿದ್ದು ಹೇಗೆ?**

ನಾನು ಎಲ್‌ಕೆಜಿ ಇದ್ದಾಗಲೇ ಪೋಷಕರು ಭರತನಾಟ್ಯಕ್ಕೆ ಕಳಿಸಿದರು. ವೇದಿಕೆಯ ರಂಗು, ಚಪ್ಪಾಳೆಯ ಪ್ರೋತ್ಸಾಹ ನನ್ನನ್ನು ಮತ್ತಷ್ಟು ಹುರಿದುಂಬಿಸಿತು. ನನ್ನ ಆಸೆಯನ್ನು ಅಪ್ಪನ ಹತ್ತಿರ ಹೇಳಿಕೊಂಡೆ, ಅವರು 'ಬೆನಕ' ತಂಡದ ಬೇಸಿಗೆ ಶಿಬಿರಕ್ಕೆ ಕಳಿಸಿ ನಾಟಕದ ಮೂಲತತ್ವ ಕಲಿಕೆಗೆ ನಾಂದಿ ಹಾಡಿದರು. ಅಲ್ಲಿ ಒಂದು ತಿಂಗಳು ಕಲಿತ ಮೇಲೆ ನಾಟಕದಲ್ಲಿ ಪಾತ್ರ ಮಾಡಿದೆ. ಅದು ನಟನೆಯ ಅಭಿರುಚಿಯನ್ನು ಮೂಡಿಸಿತು.

◆ **ರಿಯಾಲಿಟಿ ಶೋ ಮತ್ತು ಸೀರಿಯಲ್ ಇದನ್ನು ಹೇಗೆ ಅನುಭವಿಸಿದ್ದೀರಿ?**

ರಂಗಭೂಮಿ ಹಿನ್ನೆಲೆ ಇರುವುದರಿಂದ ರಿಯಾಲಿಟಿ ಶೋ ವೇದಿಕೆ ಕೂಡ ಅದೇ ಅನುಭವ ನೀಡಿತು. ರಿಯಾಲಿಟಿ ಶೋನಲ್ಲಿ ಕ್ಯಾಮೆರಾ ಎದುರು ನಿಂತಿದ್ದರೂ ಅದರ ಪರಿವೆ ಇಲ್ಲದೆ ಪೂರ್ಣ ವೇದಿಕೆಯನ್ನು ಆವರಿಸುತ್ತೇವೆ. ಚಟುವಟಿಕೆ ಕೂಡ ವಿಸ್ತಾರವಾಗಿರುತ್ತದೆ. ಮಧ್ಯರಾತ್ರಿ ಕೂಡ ಚಿತ್ರೀಕರಣ ಆಯಿತು. ಇದು ಹೊಸ ಅನುಭವ ನೀಡಿತು. ಸೀರಿಯಲ್‌ನಲ್ಲಿ ಕ್ಲೋಸ್ ಅಪ್ ಇರುತ್ತದೆ. ಮುಖದ ಭಾವದಲ್ಲಿಯೇ ಅಭಿನಯವನ್ನು ತೋರಿಸಬೇಕಾಗುತ್ತದೆ. ಇದು ಯಾವುದೂ ಕಷ್ಟ ಅನ್ನಿಸಲಿಲ್ಲ.

◆ **ಮುಂದಿನ ಕನಸಿನ ಬಗ್ಗೆ ಏನು ಹೇಳುತ್ತೀರಿ?**

'ಮಹಾನಟಿ' ಆಡಿಷನ್ ನೀಡುವಾಗಲೆ ಮುಂದೊಂದು ದಿನ ನಾಯಕಿ ನಟಿಯಾಗಿ ಬೆಳೆಯಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೆ. ಈಗ ನೆಗೆಟಿವ್ ಅನುಭವ ಆಗಿದೆ. ಮುಂದೆ ಧನಾತ್ಮಕವಾಗಿಯೇ ಕಾಣಿಸಿಕೊಳ್ಳಬೇಕು ಎಂದು ನಿರ್ಧರಿಸಿದ್ದೇನೆ. ಸದ್ಯದ ಪರಿಸ್ಥಿತಿಯಲ್ಲಿ ಮುಂದೆ ನೆಗೆಟಿವ್ ಪಾತ್ರ ಬೇಡ ಎಂದುಕೊಂಡಿದ್ದೇನೆ. ಚಂದನವನಕ್ಕೆ ಹೋಗಬೇಕು ಎನ್ನುವ ಆಲೋಚನೆಯೂ ಇದೆ. ಅದಕ್ಕೆ ಸಕಾಲವೂ ಒದಗಿ ಬರಲಿದೆ.

◆ **ನೆಗೆಟಿವ್ ಪಾತ್ರದ ಪರಿಣಾಮದ ಬಗ್ಗೆ ನಿಮಗೆ ಏನೇನು ಅನ್ನಿಸುತ್ತದೆ?**

ಸಾರ್ವಜನಿಕವಾಗಿಯೂ ಇದು ಪ್ರಭಾವಿಸುತ್ತದೆ. ಈಗ ಜನ ಬೈಯುವುದು ಕಡಿಮೆ ಆಗಿದೆ. ಮೊದಲು ಸಾಮಾಜಿಕ ಮಾಧ್ಯಮದಲ್ಲಿ ಚೆನ್ನಾಗಿ ಬೈಯುತ್ತಿದ್ದರು. ಹೀಗೆಲ್ಲ ಆಗುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಇದನ್ನು ಸಹಿಸಿಕೊಳ್ಳಲು ತುಂಬ ದಿನಗಳು ಬೇಕಾದವು. ಆಗ ಆಗುತ್ತಿದ್ದ ಕಿರಿಕಿರಿಯಿಂದ ಎಷ್ಟೊಂದು ಬಾರಿ ಅತ್ತಿದ್ದೇನೆ. ಯಾಕೆ ಜನ ಬೈಯುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರವೇ ಇರಲಿಲ್ಲ. ನಮ್ಮ ಉದ್ದೇಶ ಕೇಡು ಬಗೆಯುವುದಲ್ಲ. ಪಾತ್ರವಾಗಿ ದೃಶ್ಯವನ್ನು ನಿಭಾಯಿಸಿದ್ದೇನೆ. ಚೆನ್ನಾಗಿ ಮಾಡಬೇಕು ಎನ್ನುವುದಷ್ಟೇ ಯೋಚಿಸುತ್ತಿದ್ದೆ. ಜನ ಬೈದರೆ ನೀವು, ನಿಮ್ಮ ಪಾತ್ರ ಗೆದ್ದಂತೆ ಎಂದು ಕೆಲವರು ಸಮಾಧಾನ ಮಾಡಿದರು. ಅದೂ ನಿಜವೇ ಎಂದುಕೊಂಡೆ. ಬೇರೆ ಬೇರೆ ಸೀರಿಯಲ್‌ಗಳನ್ನು ನಾನೂ ನೋಡಿದೆ. ಅದು ಸಾಮಾನ್ಯ ಎನ್ನುವುದು ಗೊತ್ತಾಯಿತು.

ನಮಗೂ ತುಂಬ ಪರಿಣಾಮ ಬೀರುತ್ತದೆ. ನಮ್ಮ ಹಾವಭಾವದಲ್ಲಿಯೂ ಅದು ಕಾಣುತ್ತದೆ. ನೆಗೆಟಿವಿಟಿ ಇರುವ ಪಾತ್ರವನ್ನು ನಟಿಸಬೇಕು ಅಂದರೆ, ಅದು ಮಾನಸಿಕವಾಗಿ ತಳಮಳವನ್ನು ಉಂಟುಮಾಡುತ್ತದೆ. ಡೈಲಾಗ್ ಹೇಳುವಾಗ ಯಾಕೆ ಹೀಗೆ ಮಾಡಬೇಕು ಎಂದು ಒಮ್ಮೊಮ್ಮೆ ಅನ್ನಿಸಿತ್ತು. ಹೆಣ್ಣುಮಕ್ಕಳನ್ನು ಕೆಟ್ಟದಾಗಿ ಚಿತ್ರಿಸಬೇಕು ಎನ್ನುವ ಸಂದರ್ಭ ಬಂದರೆ ಬೇಸರ ಅನ್ನಿಸುತ್ತದೆ. ಆದರೆ ಸಮಾಜದಲ್ಲಿ ನಿಜವಾಗಿ ದುಷ್ಟರು ಇರುತ್ತಾರೆ. ಅವರ ಬಗ್ಗೆ ಎಚ್ಚರವಾಗಿ ಇರಬೇಕು ಎನ್ನುವ ಸಾರ ಅಂತಿಮವಾಗಿ ಮುಖ್ಯವಾಗುತ್ತದೆ.

◆ **'ಗಂಗಾ' ನೀರಿನಂತೆ ತನ್ನ ಸ್ವರೂಪವನ್ನು ಬದಲಿಸುತ್ತಲೇ ಇದ್ದಾಳೆ. ಏಕೆ ಹೀಗೆ ಆಗುತ್ತಿದ್ದಾಳೆ?**

ಈ ಪಾತ್ರ ಹಲವು ಗುಣದ ಸಮ್ಮಿಶ್ರಣದ ಕಥನ. ಆರಂಭದಲ್ಲಿ ಗಂಗಾ ಪಾಸಿಟಿವ್ ಆಗಿದ್ದಳು. ಮಾತ್ರವಲ್ಲ, ಹಳ್ಳಿಯ ಅಮಾಯಕ ಹುಡುಗಿ. ಲಂಗ ದವಣಿ ಹಾಕಿಕೊಂಡು ಮುಗ್ಧಳಾಗಿ ಕಾಣಿಸಿದ್ದಳು. ಕ್ರಮೇಣ ಅದಕ್ಕೆ ಬದಲಾವಣೆ ಬಂದು ನೆಗೆಟಿವ್ ರೂಪ ಬಂದಿತು. ನಂತರ ವಕೀಲ ವೃತ್ತಿಯನ್ನು ಆರಂಭಿಸುತ್ತಾಳೆ. ಆಗಲೂ ಶಂಕರನ ಜೊತೆ ಬಾಲ್ಯವಿವಾಹ ಆಗಿತ್ತು ಎನ್ನುವ ಅಂಶ ಇತ್ತು. ಆದರೆ ಅದೆಲ್ಲ ಸುಳ್ಳು, ಆಸ್ತಿಯನ್ನು ಲಪಟಾಯಿಸಲು ಕಟ್ಟುಕಥೆಯನ್ನು ಹೆಣೆದಿದ್ದರು ಎನ್ನುವುದು ಈಗ ಬಹಿರಂಗವಾಗಿದೆ. ನಾನು ಈ ಎಲ್ಲ ಬದಲಾವಣೆಗಳನ್ನು ಸಮರ್ಪಕವಾಗಿ ಮಾಡಿದ್ದೇನೆ. ಆ ಬಗ್ಗೆ ಸಂತೋಷ ಇದೆ. ■